**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 95/2020**

**ಚಾ.ಸಾಃ 13, ಫಾ.ಸಾಃ 7**

| | |
|---|---|
| ಸಾಕ್ಷಿದಾರನ ಹೆಸರು | ವಸಂತ ಆಚಾರ್ |
| ತಂದೆಯ ಹೆಸರು | ರಾಮಾ ಆಚಾರ್ |
| ವಯಸ್ಸು | 58 ವರ್ಷಗಳು |
| ಉದ್ಯೋಗ | ಪೋಲೀಸ್ ನಿರೀಕ್ಷಕರು, ಗೋಕರ್ಣ ಪೋಲೀಸ್ ಠಾಣೆ |
| ವಾಸ್ತವ್ಯ | ಗೋಕರ್ಣ |

**ಸಾಕ್ಷಿಯನ್ನು ದಿನಾಂಕಃ 06-02-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು ದಿನಾಂಕ 25-09-2019 ರಿಂದ ದಿನಾಂಕ 03-10-2020 ರ ವರೆಗೆ ಹೊನ್ನಾವರ ವೃತ್ತದಲ್ಲಿ ವೃತ್ತ ನಿರೀಕ್ಷಕನಾಗಿ ಕೆಲಸ ಮಾಡಿರುತ್ತೇನೆ.

ದಿನಾಂಕ 31-07-2021 ರಂದು ಸಿಬ್ಬಂದಿಯೊಂದಿಗೆ ಕಡತೋಕಾ ಜಡ್ಡಿಗದ್ದೆ ಗಸ್ತು ಕರ್ತವ್ಯ ಮಾಡುತ್ತಿದ್ದಾಗ ಚಂದಾವರ ಕಡೆಯಿಂದ ಮೋಟಾರು ಸೈಕಲ್ಲಿನಲ್ಲಿ 2 ಜನ ಬರುತ್ತಿದ್ದು ಅವರನ್ನು ಹಿಡಿದು ವಿಚಾರಿಸಲಾಗಿ ಅವರು ಯಾವುದೇ ಸಮರ್ಪಕವಾದ ಉತ್ತರವನ್ನು ನೀಡಿರುವುದಿಲ್ಲ. ಆದ್ದರಿಂದ ಅವರನ್ನು ಠಾಣೆಗೆ ಕರೆತಂದು ಹೆಸರು, ವಿಳಾಸ ವಿಚಾರಿಸಲಾಗಿ ಅವರು ಸಜ್ಜದ್ ಅಹ್ಮದ್ ತಂದೆ ಕುತುಬುದ್ದಿನ್ ಗಣಿ ಮತ್ತು ಮುಬಾಶಿರ್ ಕುತುಬುದ್ದಿನ್ ಗಣಿ, ಚಂದಾವರ ಎಂದು ತಿಳಿಸಿರುತ್ತಾರೆ. ಸಂಶಯದಿಂದ ಅವರನ್ನು ಕೂಲಂಕುಷವಾಗಿ ವಿಚಾರಿಸಲಾಗಿ ಅವರು 2019 ರ ಜನವರಿ ಕೊನೆಯ ವಾರದಲ್ಲಿ ಈ ಪ್ರಕರಣದ ಪಿರ್ಯಾದಿಯ ಮನೆಯಲ್ಲಿ ಕಳುವು ಮಾಡಿರುವುದನ್ನು ಮತ್ತು ಇತರೇ 8 ಪ್ರಕರಣಗಳಲ್ಲಿ ಕಳ್ಳತನ ಮಾಡಿರುವುದನ್ನು ಒಪ್ಪಿಕೊಂಡು ಸ್ವ ಖುಷಿ ಹೇಳಿಕೆಯನ್ನು ನೀಡಿರುತ್ತಾರೆ. ಆರೋಪಿತರು ತಾವು ಕಳುವು ಮಾಡಿರುವ ಸ್ಥಳವನ್ನು ಮತ್ತು ಮಾಲಿನ ಬಗ್ಗೆ ಮಾಹಿತಿ ನೀಡುವುದಾಗಿ ಹೇಳಿರುತ್ತಾರೆ. ಆದ್ದರಿಂದ ಚಾಸಾ-14 ರವರಿಗೆ ಆರೋಪಿತರನ್ನು ಕರೆದುಕೊಂಡು ಹೋಗಿ ಸ್ಥಳದಲ್ಲಿ ಸ್ಥಳ ಪಂಚನಾಮೆ ಮಾಡಿಕೊಂಡು ಬರುವಂತೆ ಸೂಚಿಸಿರುತ್ತೇನೆ. ಅದರಂತೆ ಚಾಸಾ-14 ರವರು ಆರೋಪಿತರನ್ನು ಕರೆದುಕೊಂಡು ಘಟನಾ ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪಂಚನಾಮೆ ಮಾಡಿಕೊಂಡು ಬಂದಿರುತ್ತಾರೆ.

ಅದೇ ದಿನ ಆರೋಪಿತರು ತಮ್ಮ ಸ್ವ ಇಚ್ಛಾ ಹೇಳಿಕೆಯನ್ನು ಕೃತ್ಯಕ್ಕೆ ಬಳಸಿದ್ದ ಕಾರನ್ನು ಮತ್ತು ಬೈಕನ್ನು ತಮ್ಮ ಮನೆಯ ಹತ್ತಿರ ನಿಲ್ಲಿಸಿರುವುದಾಗಿ ತಿಳಿಸಿದ್ದು ಅದರಂತೆ ಆರೋಪಿತರನ್ನು ಕರೆದುಕೊಂಡು ಆರೋಪಿತರ ಮನೆಯ ಹತ್ತಿರ ಪಂಚರೊಡನೆ ಹೋದಾಗ ಆರೋಪಿತರು ಮನೆಯ ಮುಂದೆ ಇದ್ದ ಒಂದು ಕಾರು ಮತ್ತು ಬೈಕನ್ನು ತೋರಿಸಿದ್ದು ಮತ್ತು ಅವುಗಳನ್ನು ಕೃತ್ಯಕ್ಕೆ ಬಳಸಿರುವುದಾಗಿ ಹೇಳಿರುತ್ತಾರೆ. ಅಲ್ಲದೇ ಆರೋಪಿತರು ನಮ್ಮನ್ನು ಮನೆಯೊಳಗೆ ಕರೆದುಕೊಂಡು ಹೋಗಿ ಕಪಾಟಿನಲ್ಲಿ ಇಟ್ಟಿದ್ದ ಬಂಗಾರದ ಮೂಗುತಿಯನ್ನು ಹಾಜರುಪಡಿಸಿ ಅದೂ ಸಹ ಕಳುವು ಮಾಲು ಎಂದು ಹೇಳಿರುತ್ತಾರೆ.

ಆದ್ದರಿಂದ ಸದರಿ ಬಂಗಾರದ ಒಡವೆಗಳನ್ನು, ಕಾರು ಮತ್ತು ಕಾರಿನಲ್ಲಿದ್ದ ಎರಡು ರಾಡನ್ನು ಮತ್ತು ಬೈಕನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಪಂಚನಾಮೆಯ ನಕಲನ್ನು ಈಗ ನೋಡುತ್ತಿದ್ದು ನಿಪಿ-10 ಎಂದು, ಸಾಕ್ಷಿ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು.

ದಿನಾಂಕ 01-08-2020 ರಂದು ಆರೋಪಿತರನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ದಿನಾಂಕ 04-08-2020 ರಂದು ಪುನಃ ಮಾನ್ಯ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಆರೋಪಿತರನ್ನು ಪೋಲೀಸ್ ಕಸ್ಟಡಿಗೆ ಪಡೆದುಕೊಂಡಿರುತ್ತೇನೆ. ಅದೇ ದಿನ ಆರೋಪಿತರು ಕಳುವು ಮಾಡಿದ ವಿವಿಧ ಪ್ರಕರಣಗಳ ಸ್ಥಳಗಳಿಗೆ ಭೇಟಿ ನೀಡಿ ಸ್ಥಳ ಪಂಚನಾಮೆಯನ್ನು ಮತ್ತು ಆರೋಪಿತರ ಮಾಹಿತಿಯಂತೆ ವಿವಿಧ ಪ್ರಕರಣಗಳ ಕಳುವು ಮಾಲುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ.

ದಿನಾಂಕ 05-08-2020 ರಂದು ಬೆಳಿಗ್ಗೆ 11-30 ರಿಂದ 12-30 ರ ಸಮಯಕ್ಕೆ ಚಾಸಾ-9 ರವರು ನನ್ನ ಕಚೇರಿಗೆ ಹಾಜರಾಗಿ ಆರೋಪಿತರಿಬ್ಬರೂ ತನ್ನ ಬಳಿ ಬಂಗಾರದ ಆಭರಣಗಳನ್ನು ಅಡವು ಇಟ್ಟಿರುವುದಾಗಿ ಹೇಳಿ ಸುಮಾರು 14 ವಿವಿಧ ನಮೂನೆಯ ಒಡವೆಗಳನ್ನು ಹಾಜರುಪಡಿಸಿರುತ್ತಾರೆ. ಸದರಿ ಒಡವೆಗಳನ್ನು ಪಂಚರ ಸಮಕ್ಷಮ ಪಂಚನಾಮೆಯಡಿಯಲ್ಲಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಮತ್ತು ಅವುಗಳನ್ನು ಠಾಣಾ ಪಿಎಫ್ ಸಂಖ್ಯೆ 116/2020 ರಂತೆ ಪಿಎಫ್‌ನಲ್ಲಿ ನಮೂದಿಸಿರುತ್ತೇನೆ. ಸದರಿ ಪಿಎಫ್‌ನ ಕ್ರಮ ಸಂಖ್ಯೆ 6 ರ ಎರಡು ಉಂಗುರಗಳು ಅಂದಾಜು 6.470 ಗ್ರಾಂ ತೂಕದ ಉಂಗುರಗಳು ಈ ಪ್ರಕರಣಕ್ಕೆ ಸಂಬಂಧಪಟ್ಟ ಕಳುವು ಮಾಲುಗಳಾಗಿರುತ್ತವೆ. ಸದರಿ ಒಡವೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಅಮಾನತ್ತು ಪಂಚನಾಮೆಯ ದೃಢೀಕೃತ ನಕಲನ್ನು ಈಗ ನೋಡುತ್ತಿದ್ದು ನಿಪಿ-5 ಎಂದು ಗುರುತಿಸಿದ್ದು, ಸಾಕ್ಷಿ ಸಹಿಯನ್ನು ನಿಪಿ-5(ಡಿ) ಎಂದು ಗುರುತಿಸಲಾಯಿತು. ಆ ಕಾಲಕ್ಕೆ ತೆಗೆದ ಫೋಟೋವನ್ನು ನಿಪಿ-6 ಎಂದು ಗುರುತಿಸಲಾಗಿದೆ. ಪಿಎಫ್ ನ ಪ್ರತಿಯನ್ನು ನಿಪಿ-5(ಇ) ಎಂದು ಗುರುತಿಸಲಾಯಿತು. ಅದೇ ದಿನ ಚಾಸಾ-9 ರವರ ಹೇಳಿಕೆಯನ್ನು ಪಡೆದುಕೊಂಡು ಮುಂದಿನ ತನಿಖೆಗೆ ಕಡತವನ್ನು ಚಾಸಾ-14 ರವರಿಗೆ ವಹಿಸಿರುತ್ತೇನೆ.

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿ. ಎಂ. ಭಂಡಾರಿಯವರು ಸಮಯಕೋರಿದ್ದರಿಂದ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**